**ಅಸಲು ದಾವ ಸಂಖ್ಯೆಃ 522/2020**

**ಪಿ.ಡಬ್ಲೂ -1**

**ದಿಃ 02-09-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ AAP ರವರಿಂದಃ-**

1. ಈಗ ನಾನು ಒಂದು ಛಾಯಾ ಚಿತ್ರ ನೋಡುತ್ತಿದ್ದು, ಅದರಲ್ಲಿ ಮೊದಲು ಎಡಭಾಗಕ್ಕೆ ಕಾಣುತ್ತಿರುವ ಮನೆ ನಂಬರ 122 ಆಗಿರುತ್ತದೆ ಅದರ ನಂತರ ಕಟ್ಟಿಗೆಗಳನ್ನು ಇಟ್ಟಿರುವ ಕಪ್ಪು ಹಂಚಿನ ಮನೆಯು 123 ರ ಮನೆ ಆಗಿರುತ್ತದೆ ಹಾಗೂ ಅದರ ನಂತರ ಕಾಣುತ್ತಿರುವ ಉದ್ದ ಗೋಡೆಯು 123/1 ರ ಮನೆಯ ಗೋಡೆ ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಗೋಡೆಯು 123 ಹಾಗೂ 123/1 ರ ನಡುವಿನ ಸಮಾಯಿಕ ಗೋಡೆಯಾಗಿರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿ ಸದರಿ ಛಾಯಾ ಚಿತ್ರವನ್ನು ನೋಡಿ ಒಪ್ಪಿ ದ ಕಾರಣ ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ನಿಡಿ-2 ರಲ್ಲಿ ಕಾಣುತ್ತಿರುವ ಮನೆಗಳು ಹಳೆಯ ಮನೆಗಳು ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಮನೆಗಳಲ್ಲಿ ಮನೆ ನಂಬರ 122 ರ ಮನೆಯು ಮೊದಲು ಕಪ್ಪು ಹಂಚಿನ ಮನೆ ಇತ್ತು ಹಾಗೂ ನಂತರ ಅದನ್ನು ನವೀಕರಣಗೊಳಿಸಿ ಕೆಂಪು ಹಂಚಿನ ಮನೆ ಮಾಡಲಾಗಿದೆ ಎಂದು ನುಡಿಯುತ್ತಾರೆ. ಮನೆ ನಂಬರ 122 ರ ಮನೆಯನ್ನು ಯಾವಾಗ ನವೀಕರಣಗೊಳಿಸಲಾಗಿದೆ 1954 ನೇ ಇಸವಿಯಲ್ಲಿ ಆಗಿರಬಹುದು ಎಂದು ನನ್ನ ತಾಯಿ ನನಗೆ ಹೇಳಿರುತ್ತಾರೆ. 1954 ರಲ್ಲಿ ನಾನು ಹುಟ್ಟಿರಲಿಲ್ಲ. ಮನೆ ನಂಬರ 122 ರ ಮನೆಯನ್ನು ನವೀಕರಣಗೊಳಿಸಲಾಗಿದೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಆಧಾರ ಇರುವುದಿಲ್ಲ. ಮನೆ ನಂಬರ 122 ಹಾಗೂ 123 ರ ಮೇಲ್ಛಾವಣಿ ಒಂದೇ ಸಮ ಇರುತ್ತವೆ ಎಂದರೆ ಸರಿ.

2. ಈಗ ನಾನು ಮತ್ತೊಂದು ಛಾಯಾ ಚಿತ್ರ ನೋಡುತ್ತಿದ್ದು, ಅದರಲ್ಲಿ ಎಡಭಾಗಕ್ಕೆ ಮೊದಲು ಕಾಣುತ್ತಿರುವ ಮನೆಯು ಮನೆ ನಂಬರ 122 ಆಗಿದ್ದು, ನಂತರ ಇರುವ ಮನೆ

ನಂಬರ 123 ರ ಮನೆಯು ಕೆಡವಲಾಗಿದೆ ಹಾಗು ಅದರ ನಂತರ ಇರುವ ಒಂದು ದೊಡ್ಡ ಮನೆ 123/1 ರ ಮನೆ ಆಗಿರುತ್ತದೆ ಹಾಗೂ ಅದು ಇಂದಿನ ಸ್ಥಿತಿ ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ಸದರಿ ಛಾಯಾ ಚಿತ್ರ ನೋಡಿ ಒಪ್ಪಿ ದ ಕಾರಣ ಅದನ್ನು ನಿಡಿ-3 ಎಂದು ಗುರುತಿಸಲಾಯಿತು. ಮೊದಲು ಎಂದರೆ ನಾನು ಹುಟ್ಟುವ ಮೊದಲೇ ಮನೆ ನಂಬರ 123 ಹಾಗೂ 123/1 ಎರಡೂ ಸೇರಿ ಒಂದೇ ಮನೆಯಾಗಿತ್ತು ಹಾಗೂ ಅದಕ್ಕೆ ಒಂದೇ ಸಂಖ್ಯೆ ಇತ್ತು ಎಂದರೆ ಸರಿ.

3. ಹಳೆ ಮನೆ ನಂಬರ 123 ರ ಮೂಲ ಮಾಲೀಕರು ಎಂದರೆ ಭರಮಪ್ಪ ಕುಬೇರಪ್ಪ ನರಸಗೌಡ ಎಂದರೆ ಸಾಕ್ಷಿಯು ಅದರ ಮೂಲ ಮಾಲೀಕರು ಕುಬೇರಪ್ಪ ಪಾಯಪ್ಪ ನರಸಗೌಡ ಆಗಿದ್ದರು ಎಂದು ನುಡಿಯುತ್ತಾರೆ. ಸದರಿ ಕುಬೇರಪ್ಪ ರವರಿಗೆ ಇಬ್ಬರು ಮಕ್ಕಳು ಇದ್ದರು,ಅವರೆಂದರೆ ಭರಮಪ್ಪ ಹಾಗು ಅಪ್ಪಯ್ಯ. ಕುಬೇರಪ್ಪ ರವರ ಮಗ ಭರಮಪ್ಪ ರವರು 1958 ನೇ ಇಸವಿಯಲ್ಲಿ ಎಂದರೆ ದಿಃ 31-05-1958 ರಂದು ಮನೆ ನಂಬರ 123 ರಲ್ಲಿ ಅರ್ಧ ಹಿಸ್ಸೆಯನ್ನು ಭರಮನ್ನ ದೇವಪ್ಪ ನರಸಗೊಂಡ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಆ ರೀತಿ ಅರ್ಧ ಹಿಸ್ಸೆಯನ್ನು ಮಾರಾಟ ಮಾಡಿದ ಕುರಿತು ನನಗೆ ನನ್ನ ತಾಯಿ ಹೇಳಿರುತ್ತಾರೆ. ನಾನು ಸ್ವತಃ ಸದರಿ ಮಾರಾಟ ಮಾಡಿದ ಜಾಗದ ಉದ್ದ ಹಾಗೂ ಅಗಲ ಅಳತೆಯನ್ನು ದಾಖಲೆಯಲ್ಲಿ ನೋಡಿರುವುದಿಲ್ಲ.

4. ಈ ದಾವೆಯಲ್ಲಿ ಪ್ರತಿವಾದಿಯರು ದಿಃ 31-05-1958 ರ ಕ್ರಯಪತ್ರದ ಅನುಸಾರ ತಾವು ಖರೀದಿಸಿದ ಜಾಗದ ಅಳತೆಯನ್ನು ಹಾಗೂ ಚೆಕ್ಕುಬಂದಿಯನ್ನು ನಮೂದಿಸಿರುತ್ತಾರೆ ಎಂದರೆ ಸರಿ.

ಲಿಖಿತ ಹೇಳಿಕೆಯನ್ನು ಸಲ್ಲಿಸಿದ ನಂತರ ಸದರಿ ಕ್ರಯ ಪತ್ರವನ್ನು ಪ್ರತಿವಾದಿಯರು ಹಾಜರುಪಡಿಸಿದ್ದನ್ನು ನಾನು ತೆಗೆದು ಓದಿರುತ್ತೇನೆ. ಸದರಿ ಕ್ರಯ ಪತ್ರದಲ್ಲಿ ಮನೆಯ ಅಳತೆ ಹಾಗೂ ಹಿತ್ತಲಿನ ಜಾಗದ ಅಳತೆಯನ್ನು ನಮೂದು ಮಾಡಲಾಗಿದೆ ಎಂದರೆ ಸರಿ. ಸದರಿ ಕ್ರಯ ಪತ್ರದಲ್ಲಿ ಬರೆದಿರುವ ಅಳತೆ ಸರಿಯಿರುತ್ತದೆ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರದಲ್ಲಿ ಪ್ರತಿವಾದಿಯರು ಹಿತ್ತಲಿನ ಅಳತೆಯನ್ನು 19 ಅಡಿ 6 ಇಂಚು ಅಗಲ ತೋರಿಸಿರುತ್ತಾರೆ. ಸದರಿ ಕ್ರಯ ಪತ್ರದಲ್ಲಿ ಹಿತ್ತಲಿನ ಉದ್ದದ ಅಳತೆಯನ್ನು 200 ಅಡಿ ತೋರಿಸಿರುತ್ತಾರೆ. ಸದರಿ ಕ್ರಯ ಪತ್ರದಲ್ಲಿ ಮನೆ ನಂಬರ 123 ರಲ್ಲಿ ಇರುವ ಮನೆಯ ಅಗಲವನ್ನು 17 ಅಡಿ 1 ಇಂಚು ಹಾಗೂ ಉದ್ದದ ಅಳತೆಯನ್ನು 80 ಅಡಿ ತೋರಿಸಿರುತ್ತಾರೆ. ಖರೀದಿ ಪತ್ರ ಆದ ನಂತರ ಸದರಿ ಮನೆಗೆ 123/1 ಎಂದು ಸಂಖ್ಯೆ ನೀಡಲಾಗಿದೆ ಎಂದರೆ ಸರಿ. ದಿಃ 31-05-1958 ರ ಖರೀದಿ ಪತ್ರ ತಪ್ಪಾಗಿರುತ್ತದೆ ಎಂದು ಅದನ್ನು ಪ್ರಶ್ನಿಸಿ ನಾನು ಯಾವುದೇ ದಾವೆ ಹೂಡಿರುವುದಿಲ್ಲ. ಸದರಿ ಕ್ರಯ ಪತ್ರದಲ್ಲಿ ಮಾರಾಟ ಮಾಡಿರುವ ಜಾಗವನ್ನು ಮನೆ ನಂಬರ 123 ರ ಅರ್ಧಭಾಗ ಎಂದು ಎಲ್ಲಿಯೂ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಸದರಿ ಖರೀದಿ ಪತ್ರ ಆದ ದಿನದಿಂದ ಅದರಲ್ಲಿ ತೋರಿಸಿರುವ ಅಳತೆಯ ಜಾಗದಲ್ಲಿ ಪ್ರತಿವಾದಿಯರ ಅಜ್ಜ ಹಾಗೂ ಅವರ ನಂತರ ಅವರ ಮಕ್ಕಳು ಹಾಗೂ ಈಗ ಪ್ರತಿವಾದಿಯರು ಕಬ್ಜೆಯಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

5. ಈ ದಾವೆ ಹೂಡುವ ಸಮಯದಲ್ಲಿ ಮನೆ ನಂಬರ 123 ಹಾಗೂ 123/1 ರ ಅಳತೆಯನ್ನು ನಾನು ಮಾಡಿದ್ದೆ. ಅದಕ್ಕೂ ಮೊದಲು ಎಂದಿಗೂ ಸಹ ನಾನು ಅಳತೆ ಮಾಡಿಸಿರಲಿಲ್ಲ. ದಾವೆ ಹೂಡುವ ಸಮಯದಲ್ಲಿ ಮಾಡಿರುತ್ತೇನೆ ಎಂದು ಹೇಳಲಾದ ಅಳತೆಯನ್ನು ಮನೆ ನಂಬರ 123 ಹಾಗೂ 123/1 ಎರಡರ ಅಳತೆಯನ್ನು ಮಾಡಿರುತ್ತೇನೆ.

ಸದರಿ ಅಳತೆ ಕಾರ್ಯವನ್ನು 2020 ನೇ ಇಸವಿಯಲ್ಲಿ ಮಾಡಿರುತ್ತೇನೆ. ಸದರಿ ಅಳತೆಯ ಟಿಪ್ಪಣಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಅಳತೆ ಕಾರ್ಯವನ್ನು ಓರ್ವ ಖಾಸಗಿ ಇಂಜಿನಿಯರ ಆದ ಸೂರ್ಯವಂಶಿ ರವರಿಂದ ಮಾಡಿಸಿದ್ದೆ. ಸದರಿ ಅಳತೆ ಮೊಜಣಿ ಸಮಯದಲ್ಲಿ ಪ್ರತಿವಾದಿಯರಿಗೆ ನೋಟಿಸ ನೀಡಿರಲಿಲ್ಲ. ಸದರಿ ಅಳತೆ ಕೆಲಸವನ್ನು ಪ್ರತಿವಾದಿಯರ ಸಮಕ್ಷಮ ಮಾಡಲಾಗಿದೆ. ದಾವೆ ಹೂಡುವ ಸಮಯದಲ್ಲಿ ಆ ರೀತಿ ಅಳತೆ ಕೆಲಸ ಮಾಡಿಸಿರುತ್ತೇನೆ ಹಾಗು ಅದನ್ನು ಪ್ರತಿವಾದಿಯರ ಸಮಕ್ಷಮ ಮಾಡಲಾಗಿದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮನೆ ನಂಬರ 123/1 ರ ಜಾಗದಲ್ಲಿ ಈ ದಾವೆ ಹೂಡುವ ಮೊದಲು ಹಾಗೂ ನಂತರ ಯಾವುದೇ ಕಟ್ಟಡ ಕೆಲಸ ಆಗಿರುವುದಿಲ್ಲ ಎಂದರೆ ಸರಿ. ಮನೆ ನಂಬರ 123/1 ರ ಹಿತ್ತಲಿನ ಜಾಗದಲ್ಲಿ ಒಂದು ಆರ್ ಸಿ ಸಿ ಕಟ್ಟಡ ಕಟ್ಟಲಾಗಿದೆ ಎಂದರೆ ಸಾಕ್ಷಿ 2023 ನೇ ಇಸವಿಯಲ್ಲಿ ಕಟ್ಟಲಾಗಿದೆ ಎಂದು ನುಡಿಯುತ್ತಾರೆ. ಸದರಿ ಹಿತ್ತಲಿನ ಜಾಗದಲ್ಲಿ ಆಗಿರುವ ಕಟ್ಟಡ ಕೆಲಸವು ದಿಃ 31-05-1958 ರ ಕ್ರಯ ಪತ್ರದಲ್ಲಿ ತೋರಿಸಿರುವ ಖಾಲಿಜಾಗದ ಅಳತೆಯಲ್ಲಿ ಪ್ರತಿವಾದಿಯರ ಜಾಗದಲ್ಲಿಯೇ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಕಟ್ಟಡ ಕೆಲಸವನ್ನು ಪ್ರತಿವಾದಿಯರು ತನ್ನ ಜಾಗ ಅತಿಕ್ರಮಣ ಮಾಡಿ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಮನಾಯಿ ಆದೇಶದ ವಿರುದ್ಧ ನಾನು ಸಲ್ಲಿಸಿದ ಮೇಲ್ಮನವಿಯಲ್ಲಿ ಮಾನ್ಯ ನ್ಯಾಯಾಲಯವು ಪ್ರತಿವಾದಿಯರು ತಮ್ಮ ಕ್ರಯ ಪತ್ರದಲ್ಲಿ ತೋರಿಸಿರುವ ಅಳತೆಯ ಜಾಗದಲ್ಲಿ ಕಟ್ಟಡ ಕೆಲಸ ಕೈಗೊಳ್ಳಬಹುದು ಎಂದು ಆದೇಶ ಮಾಡಿರುತ್ತಾರೆ ಎಂದರೆ ಸಾಕ್ಷಿ ತನ್ನ ಜಾಗದಲ್ಲಿ ಅತಿಕ್ರಮಣ ಮಾಡದೇ ಕಟ್ಟಡ ಕೆಲಸ ಮಾಡಬೇಕು ಎಂದು ಆದೇಶವಾಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ಮೇಲ್ಮನವಿ ಆದೇಶದಲ್ಲಿ ನಮ್ಮ

ಜಾಗ ಅತಿಕ್ರಮಣ ಮಾಡಿ ಪ್ರತಿವಾದಿಯರು ಕಟ್ಟಡ ಕಟ್ಟಬಾರದು ಎಂದು ಯಾವುದೇ ಆದೇಶ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ನ್ಯಾಯಾಲಯದ ಆದೇಶದ ಪ್ರಕಾರವೇ ತಮ್ಮ ಜಾಗದಲ್ಲಿ ಕಟ್ಟಡ ಕಟ್ಟಿಕೊಂಡಿರುತ್ತಾರೆ ಹಾಗೂ ನನ್ನ ಜಾಗದಲ್ಲಿ ಯಾವುದೇ ಅತಿಕ್ರಮಣ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹಾಗೂ ಪ್ರತಿವಾದಿಯರ ನಡುವೆ ಜಾಗಕ್ಕೆ ಸಂಬಂಧಪಟ್ಟಂತೆ 25 ವರ್ಷಗಳಿಂದ ತಕರಾರು ಇರುತ್ತದೆ ಎಂದರೆ ಸಾಕ್ಷಿ ಸುಮಾರು 50 ವರ್ಷಗಳಿಂದಲೇ ತಕರಾರು ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ಹಾಗೂ ಪ್ರತಿವಾದಿಯರು ನಡುವೆ ಒಳ್ಳೆಯ ಸಂಬಂಧ ಇಲ್ಲದ ಕಾರಣ ವಿನಾಕರಣ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಕ್ರಯ ಪತ್ರದಲ್ಲಿ ಇರುವ ಅಳತೆಯ ಜಾಗಕ್ಕೆ ಸಂಬಂಧಪಟ್ಟಂತೆ ಇಲ್ಲಿಯವರೆಗೂ ತೆರಿಗೆ ಪಾವತಿ ಮಾಡುತ್ತಾ ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**